ಯಾರೋ ಮಾಡಿದ್ದನ್ನು ಯಾರೋ ಕ್ಲೈಮ್ ಮಾಡುವುದಕ್ಕೆ ಅವಕಾಶ ಕೊಡಬೇಡಿ ಎಂಬುದು ನನ್ನ ವಿನಂತಿ. ಇವರು ಮಾಡಿರುವಂತಹ 10 ವರ್ಷಗಳ ಹಿಂದಿನಿಂದಲೂ ಅದು ಚಾಲನೆಯಲ್ಲಿತ್ತು. ಅದರ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ವಿಶ್ವೇಶ್ವರ ಹೆಗಡೆಯವರು ಕನ್ನಡ ಗಣಕ ಪರಿಷತ್ತಿಗೆ ಹೆಚ್ಚಿನ ಮಹತ್ವ ಕೊಡಬೇಕೆಂದು ಹೇಳಿದ್ದಾರೆ. ನಾವು ಅವರಿಗೇ ಕೊಟ್ಟಿದ್ದೇವೆ. ನುಡಿ ಕೊಟ್ಟಿದ್ದೇ ಅವರಿಗೆ. ಬೇರೆ ಕೆಲವು ಕಡೆ ಖಾಸಗಿ ಹಿತಾಸಕ್ತಿಗಳು ಪ್ರೈವೇಟ್ ವಿಜನ್ಸಿಗಳೇನಿವೆ, ಅವರೂ ಸಹ ತಪ್ಪು ಮಾಡುತ್ತಿದ್ದಾರೆ, ಬೇರೆ ದೃಷ್ಟಿಯಿಂದ ಕೂಡ, vested interests are there. I agree. ನಾನು ಒಪ್ಪುತ್ತೇನೆ. ನಮ್ಮ ಇ–ಗವರ್ನನ್ಸ್ ಪ್ರಾಜೆಕ್ಟ್ ಏನಿದೆ, ಪ್ರತಿಯೊಂದು ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕಿನಲ್ಲೂ ಮುಟ್ಟಿಸತಕ್ಕಂಥ ಒಂದು ಕಾಂಪ್ರಹೆನ್ಸೀವ್ ಪ್ರೋಗ್ರಾಮ್ ಮಾಡಿದ್ದೇವೆ. ಈಗಾಗಲೇ ಕೇಂದ್ರ ಸರ್ಕಾರ ಕೂಡ ಒಂದು ನೂರು ಕೋಟಿ ರೂ ಕೊಡತಕ್ಕ ಆಶ್ವಾಸನೆ ಕೊಟ್ಟಿದ್ದಾರೆ. ಆದರೆ, ನಾವು ಹೇಳತಕ್ಕಂಥಾದ್ದು ಏನೆಂದರೆ, ಇದಕ್ಕೆ ಇನ್ನೂ ಹೆಚ್ಚಿನ ಶಕ್ತಿ ಕೊಡಬೇಕು ಮತ್ತು ಎಲ್ಲಾ ಕಡೆ ಲಿಪಿಗಳು ಉಚಿತವಾಗಿ ಲಭ್ಯವಿರುಬೇಕು. ಈ ಟೆಕ್ನಾಲಜಿಗೆ Intellectual Property Rights ಏನಿದೆ, ಸಾರ್ವಜನಿಕ ಕ್ಷೇತ್ರದಲ್ಲಿ ಬಿಡುಗಡೆ ಮಾಡುವುದು ಸೂಕ್ತವಲ್ಲ, ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ನಮ್ಮ ಶಾಸಕ ಮಿತ್ರರು ಹೇಳಿದ್ದಾರೆ, ಎಲ್ಲೋ 30 ಲಕ್ಷ ರೂಪಾಯಿಗಳನ್ನು ಡ್ರಾ ಮಾಡಿದ್ದಾರೆಂದು ಹೇಳಿದ್ದಾರೆ. ಅದರ ಬಗ್ಗೆ ಕೂಡ ಸರ್ಕಾರ ಗಮನ ಕೊಡುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಯಾವ ಯಾವ ಇಲಾಖೆಗಳಿಗೆ ಈ ಸಾಫ್ಟ್‌ವೇರ್ ಕನ್ಸಲ್‌ಟೆನ್ಸಿಯನ್ನು ಕೊಟ್ಟಿದೆ, ಆ ಇಲಾಖೆಗಳ ವಿವರ ಇದೆ ಮತ್ತು ಅವರಿಗೆ ಕೊಟ್ಟಿರುವಂಥ ಹಣ ಇದೆ. ಇದರಲ್ಲಿ ಪಾರದರ್ಶಕತೆ ನಿರ್ಮಾಣವಾಗುವಂಥ ಅಗತ್ಯ ಇದೆ. ಆ ಕಂಪನಿಗಳಿಗೆ ಯಾವ ಆಧಾರದ ಮೇಲೆ, ಆ ಕೆಲಸವನ್ನು ಆ ಕನ್ಸಲ್‌ಟೆನ್ಸಿಗೆ ಕೊಟ್ಟಿದೆ. ಅವರಿಗೆ ಕ್ರೆಡಿಬಲಿಟಿ ಕೊಡುವಂಥ ಅಥವಾ ಅವರಿಗೆ ಟೈಂಬಾಂಡ್ ಪ್ರೋಗ್ರಾಮನ್ನು ಮಾಡಿಕೊಡುವಂಥ ಆಗ್ರಹವನ್ನು ಮಾಡದೇ ಹೋದರೆ ಅವರೂ ಸಹ ವಿಳಂಬವನ್ನು ಮಾಡುತ್ತಾರೆ. ಇದರಿಂದ ಈ ತಂತ್ರಾಂಶಗಳಲ್ಲಿ ಸಾಫ್ಟ್‌ವೇರ್‌ಗಳಲ್ಲಿ ಬದಲಾವಣೆಗಳು ದಿನದಿಂದ ದಿನಕ್ಕೆ ಆಗುತ್ತಿರುತ್ತದೆ. ಅದರ ಲಾಭವನ್ನು ತೆಗೆದುಕೊಂಡು ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಬರುವಂಥ ರೀತಿಯಲ್ಲಿ ಅವರು ಪ್ರಯತ್ನ ಮಾಡಬಹುದು. ಈ ಕಂಪನಿಗಳ ಮೇಲೆ ಇಲಾಖೆಯವರು ಆ ರೀತಿಯ ಹಿಡಿತವನ್ನು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಕರ್ನಾಟಕದಲ್ಲಿ "ಭೂಮಿ" ಎಂಬ ಕಾರ್ಯಕ್ರಮ ಇಡೀ ದೇಶದಲ್ಲೇ ಮಾದರಿಯಾಗಿದೆ. ನಾನು ಸರ್ಕಾರವನ್ನು ಮೆಚ್ಚುತ್ತೇನೆ, ಬಹಳ ಚೆನ್ನಾಗಿ ಇದೆ. ಆದರೆ, ಉಳಿದಿದ್ದು ಇಲಾಖೆಗಳಲ್ಲಿ ಆಗುತ್ತಾ ಇರುವುದು, ಬಹಳ ತೊಂದರೆಯಾಗಿದೆ.

ಶ್ರೀ ಧರ್ಮಸಿಂಗ್ : ಒಟ್ಟಾರೆ ವಿಶ್ವೇಶ್ವರ ಹೆಗಡೆಯವರು ಪ್ರಸ್ತಾಪ ಮಾಡಿದಂಥ ಭಾವನೆಗಳು ನಮಗೆ ಮನದಟ್ಟಾಗಿವೆ. ಇದರ ಬಗ್ಗೆ ನಾವು ಹೆಚ್ಚಿನ ಕ್ರಮ ತೆಗೆದುಕೊಳ್ಳುತ್ತೇವೆ. ಎನ್ನತಕ್ಕಂಥ ಭರವಸೆಯನ್ನು ಕೊಡುತ್ತೇನೆ.

ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಯೋಜನೆ.

147 (2105) ಶ್ರೀ.ರವಿ.ಸಿ.ಟಿ. ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1. ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಯಗಚಿ ನದಿಗೆ ಚಿಕ್ಕಮಗಳೂರು ಒಳಚರಂಡಿ ಮತ್ತು ಕೊಳಚೆ ನೀರು ಸೇರ್ಪಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ;

3. ಇದರ ಅಂದಾಜು ಮೊತ್ತ ಎಷ್ಟು ಮತ್ತು ಎಂದಿನಿಂದ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ;

4. ಯಗಚಿ ನದಿಗೆ ಕೊಳಚೆ ನೀರು ಹರಿಯದಂತೆ ಸದ್ಯಕ್ಕೆ ಯಾವ ಕ್ರಮ ಕೈಗೊಂಡಿದೆ?

1. ಬಂದಿದೆ.

2. ಒಳಚರಂಡಿ ಯೋಜನೆಯ ಶುದ್ದೀಕರಣ ಘಟಕವು 1995ರಲ್ಲಿ ನಿರ್ಮಾಣಗೊಂಡಿದ್ದು, ಈ ವ್ಯವಸ್ಥೆಯನ್ನು ಚಿಕ್ಕಮಗಳೂರು ನಗರಸಭೆಯವರೇ ನಿರ್ವಹಿಸುತ್ತಿರುತ್ತಾರೆ. ಈ ಘಟಕದಲ್ಲಿರುವ ಏರೆಯೇಟೆಡ್ ಲಗೂನ್ಸ್‌ಗಳು ಕೆಲಸ ಮಾಡದೇ ಕೆಟ್ಟು ಹೋಗಿರುತ್ತವೆ. ಇವುಗಳನ್ನು ದುರಸ್ಥಿ ಮಾಡಬೇಕಾಗಿದೆ, ಚಿಕ್ಕಮಗಳೂರಿನಿಂದ ಹರಿದು ಬಂದ ಕೊಳಚೆ ನೀರನ್ನು ಬೇಸಿಗೆಯಲ್ಲಿ ಮಧ್ಯದಲ್ಲಿಯೇ ರೈತರು ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿದ್ದಾರೆ, ಚಿಕ್ಕಮಗಳೂರು ನಗರಕ್ಕೆ ಸರಬರಾಜು ಆಗುವ ಯಗಚಿ ಜಲಾಶಯಕ್ಕೆ ಬೇಸಿಗೆಯಲ್ಲಿ ಕೊಳಚೆ ನೀರು ಸೇರುತ್ತಿಲ್ಲ. ಆದರೆ, ಮಳೆಗಾಲದಲ್ಲಿ ಸೇರುತ್ತದೆ. ಯಗಚಿ ಜಲಾಶಯದಿಂದ ನೀರನ್ನು ಶಿದ್ದೀಕರಿಸಿ ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ.

3. ದುರಸ್ಥಿ ಕೆಲಸಕ್ಕೆ ಸುಮಾರು ರೂ.25.00 ಲಕ್ಷ ಬೇಕಾಗುತ್ತದೆ. ಈ ಹಣವನ್ನು ನಗರಸಭೆಯವರು ಮಂಡಳಿಗೆ ಪಾವತಿಸಿದ ಕೂಡಲೇ ದುರಸ್ಥಿ ಕಾರ್ಯ ಕೈಗೊಳ್ಳಲಾಗುವುದು.

4. ದುರಸ್ಥಿ ಕಾರ್ಯವನ್ನು ಕೂಡಲೇ ತೆಗೆದುಕೊಳ್ಳಲು ನಗರಸಭೆಗೆ ಸೂಚಿಸಲಾಗುತ್ತದೆ.

ಶ್ರೀ ಸಿ.ಟಿ.ರವಿ : ಮಾನ್ಯ ಸಭಾಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆಗೆ ಉತ್ತರ "ಬಂದಿದೆ" ಎಂದು ಹೇಳಿದ್ದಾರೆ ಮತ್ತು ಎರಡನೇ ಪ್ರಶ್ನೆಗೆ ಏರಿಯೇಟೆಡ್ ಲಗೂನ್ಸ್‌ಗಳು ಕೆಟ್ಟುಹೋಗಿವೆ ಹಾಗಾಗಿ ಮಳೆಗಾಲದಲ್ಲಿ ಕೊಳಚೆ ನೀರು ಸೇರುತ್ತೆ, ಬೇಸಿಗೆಯಲ್ಲಿ ಸೇರುವುದಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಬೇಸಿಗೆಯಲ್ಲಿ ಏಕೆ ಸೇರುವುದಿಲ್ಲ, ಕೆಟ್ಟು ಎಷ್ಟು ವರ್ಷವಾಯಿತು ಎಂಬ ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಏರಿಯೇಟೆಡ್ ಲಗೂನ್ಸ್‌ಗಳು ಒಳಚರಂಡಿ ನೀರನ್ನು ಶಿದ್ದೀಕರಣ ಮಾಡಿ, ಆ ನಾಲೆಗೆ ಬಿಡುವ ಕೆಲಸ ಮಾಡಬೇಕು. ಅದು ಸುಮಾರು 3–4 ತಿಂಗಳಿಂದ ಕೆಟ್ಟು ಹೋಗಿದೆ. ಆದರೆ, ಅದರ ನಿರ್ವಹಣೆಯ ಕೆಲಸವನ್ನು ಅಲ್ಲಿಯ ಸ್ಥಳೀಯ ಸಂಸ್ಥೆಗಳಾದ ಮುನಿಸಿಪಾಲಿಟಿಯವರು ಅಥವಾ ಪುರಸಭೆಯವರು ಮಾಡಬೇಕಾಗಿತ್ತು. ಆದರೆ, ಅವರು ಇನ್ನೂ ಮಾಡಿಲ್ಲ. ಇದು ಸರ್ಕಾರದ ಗಮನಕ್ಕೂ ಬಂದಿದೆ. ಆ ಪುರಸಭೆಗೆ ನಾವು ಮುರು ತಿಂಗಳು ಕಾಲಾವಕಾಶವನ್ನು ಕೊಟ್ಟಿದ್ದೇವೆ. ಅವರು ಮೂರು ತಿಂಗಳಲ್ಲಿ ಮಾಡದೇ ಇದ್ದರೆ, ನಾವು ಹೊಸ ಗ್ರಾಂಟನ್ನು ಕೊಟ್ಟು, ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಸಿ.ಟಿ.ರವಿ : ಮಾನ್ಯ ಮಂತ್ರಿಗಳು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಅವು ಕೆಟ್ಟು ಹೋಗಿ ಈಗಾಗಲೇ ನಾಲ್ಕು ವರ್ಷಗಳಾಗಿವೆ. ನಾಲ್ಕು ವರ್ಷದಿಂದ ಒಂದು ಮತ್ತು ಎರಡನ್ನೂ ಸೇರಿಸಿ ತೀರ್ಥ ಪ್ರಸಾದದ ರೂಪದಲ್ಲಿ ಮತ್ತೆ ಅದನ್ನು ವಾಪಸ್ ಕೊಡತಕ್ಕ ಕೆಲಸ ಕುಡಿಯುವ

ನೀರಿನ ಜೊತೆಗೇ ನಡೆಯುತ್ತಾ ಇದೆ. ಮುರಾರ್ಜಿ ದೇಸಾಯಿಯವರು ಸ್ವಮುತ್ರಪಾನ ಮಾಡುವುದರಿಂದ ಆರೋಗ್ಯಕ್ಕೆ ಒಳ್ಳೆಯದಾಗುತ್ತದೆ ಎನ್ನುವುದನ್ನು ಪ್ರಯೋಗ ಮಾಡಿ ಕಂಡುಕೊಂಡು, ಅವರ ಪುಸ್ತಕದಲ್ಲಿ ಬರೆದಿದ್ದರು. ಬಹುಶಃ ಅದರಿಂದ ಪ್ರೇರಣೆ ಪಡೆದೇ ಏನೋ ಎಲ್ಲರ ಮೂತ್ರವನ್ನೂ ಒಟ್ಟು ಸೇರಿಸಿ ಚಿಕ್ಕಮಗಳೂರು ನಗರದ ಒಂದು ಲಕ್ಷ ಜನರಿಗೆ ಕುಡಿಸತಕ್ಕ ಕೆಲಸವನ್ನು ಈ ಸರ್ಕಾರ ಮಾಡುತ್ತಾ ಇದೆ. ಹಾಗಾಗಿ, ನಮಗೆ ಈ ಮುರಾರ್ಜಿ ದೇಸಾಯಿಯವರ ಮಾದರಿಯನ್ನು ಅನುಸರಿಸಿದರೆ, ಹಾನಿ ಅಥವಾ ಲಾಭ ಅವರವರಿಗೇ ಆಗುತ್ತದೆ. ಆದರೆ, ಎಲ್ಲರ ಮೂತ್ರವನ್ನೂ ಕುಡಿಸುವುದರಿಂದ ಆರೋಗ್ಯ ಕೆಟ್ಟುಹೋಗುವುದು ಗ್ಯಾರಂಟಿ. ಹಾಗಾಗಿ ಸಬೂಬು ಹೇಳದೇ, ಇದು ಸರ್ಕಾರದ ಕರ್ತವ್ಯ ಇದೆ. ಒಳ್ಳೆಯ ಶುದ್ದೀಕರಣವಾದ ನೀರನ್ನು ಕೊಡತಕ್ಕಂಥಾದ್ದು ಸರ್ಕಾರದ ಕರ್ತವ್ಯ. ಇವತ್ತು ಎಲ್ಲಾ ನಗರಸಭೆಗಳ ಸ್ಥಿತಿ ಏನಿದೆ ಎಂದರೆ, ಅವರು ಇಂತಹ ಎಲ್ಲಾ ಕೆಲಸಗಳನ್ನು ಮೆಯಿನ್‌ಟೇನ್ ಮಾಡುವ ಸ್ಥಿತಿಯಲ್ಲಿ ಅವರು ಇಲ್ಲ. ಹಾಗಾಗಿ ಚಿಕ್ಕಮಗಳೂರು ನಗರಸಭೆಯವರು 25 ಲಕ್ಷ ರೂ ಕಟ್ಟುವುದಿಲ್ಲ, ಇವರು ಎಲ್ಲರ ಮೂತ್ರ ಕುಡಿಸುವುದು ಬಿಡುವುದಿಲ್ಲ. ಹಾಗಾಗಿ, ಇವರೇ ನೇರವಾಗಿ ಕೈಗೆತ್ತಿಕೊಂಡು ಕಾರ್ಯ ಮಾಡುವುದಕ್ಕೆ ನಿರ್ದೇಶನ ಕೊಡಬೇಕೆಂದು ನನ್ನ ವಿನಂತಿ.

ಶ್ರೀ ಆರಗ ಜ್ಞಾನೇಂದ್ರ : ಚಿಕ್ಕಮಗಳೂರಿನವರಿಗೆ ಸ್ವಮೂತ್ರ ಇಲ್ಲ, ಪರ ಮೂತ್ರ ಕುಡಿಸುತ್ತಾ ಇದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಏರಿಯೇಟೆಡ್ ಲಗೂನ್ಸ್ ಕೆಟ್ಟು ಹೋಗಿರುವುದರಿಂದ, ಅದರ ನಿರ್ವಹಣೆ ಕೆಲಸ ಮುನಿಸಿಪಾಲಿಟಿಯವರದು ಎಂದು ನಾನು ಆಗಲೇ ಹೇಲಿದೆ. ಅಲ್ಲಿ ನೀರು ಬೇಸಿಗೆಯಲ್ಲಿ ಮಾತ್ರ ನಾಲೆಯಲ್ಲಿ ಬಿಡುತ್ತಾರೆ, ಅದನ್ನು ರೈತರು ಉಪಯೋಗ ಮಾಡುವುದರಿಂದ, ನದಿಯಲ್ಲಿ ಅಥವಾ ಆ ಜಲಾಶಯದಲ್ಲಿ ಸಂಪೂರ್ಣವಾಗಿ ಹೋಗುತ್ತಾ ಇಲ್ಲ. ಆದರೂ ಕೂಡ ಸರ್ಕಾರದವರು ಒಂದು ಹೊಸ ಯೋಜನೆಗೆ ರೂಪುರೇಷೆ ಮಾಡುತ್ತಾ ಇದ್ದೇವೆ. ಅಂದರೆ, ಚಿಕ್ಕಮಗಳೂರಿನಲ್ಲಿರತಕ್ಕ ಹೊಸ ಬಡಾವಣೆ ಮತ್ತು ಇಲ್ಲಿ ಈಗ ಇರತಕ್ಕಂಥಾದ್ದು ಒಳಚರಂಡಿ ಭಾಗಶಃ ಇವೆ. ಅದನ್ನು ಸಂಪೂರ್ಣವಾಗಿ ಮುಗಿಸುವುದಕ್ಕೆ ಹೊಸ ರೂಪುರೇಷೆಯನ್ನು ಮಾಡಿದ್ದೇವೆ, ಇದನ್ನು ಎರಡು ವರ್ಷಗಳಲ್ಲಿ ಸಂಪೂರ್ಣವಾಗಿ ಮುಗಿಸಿಕೊಡುತ್ತೇವೆಂದು ಹೇಳುತ್ತೇನೆ.

ನರಸಿಂಹರಾಜಪುರ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆ.

148 (2189) ಶ್ರೀ ಜೀವರಾಜ್ ಡಿ ಎನ್ (ಶೃಂಗೇರಿ) ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ನರಸಿಂಹರಾಜಪುರ ಪಟ್ಟಣಕ್ಕೆ ಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;
2. ಇದ್ದಲ್ಲಿ, ಈ ಯೋಜನೆಯ ಅಂದಾಜು ವೆಚ್ಚವೆಷ್ಟು;
3. ಈ ಯೋಜನೆಗೆ ಕೇಂದ್ರ ಸರ್ಕಾರದ ನೆರವು ಮಂಜೂರು ಆಗಿದೆಯೇ;
4. ಈ ಯೋಜನೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಆರ್.ಮೋರೆ : (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು)

1. ಇದೆ.